ಕರ್ನಾಟಕ ವಿಧಾನ ಪರಿಷತ್

1). ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	442
2). ಸದಸ್ಯರ ಹೆಸರು	:	ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು)
3). ಉತ್ತರಿಸುವ ದಿನಾಂಕ	:	04.02.2021
4). ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	2019-20ರ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಅನುದಾನದಲ್ಲಿ ನಿಯಮದಂತೆ ರೂ.2.00 ಕೋಟಿ ಬಿಡುಗಡೆ ಆಗಬೇಕಾಗಿದ್ದು, ಕೇವಲ ರೂ.50 ಲಕ್ಷಗಳು ಮಾತ್ರ ಬಿಡುಗಡೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಹೌದು 2019-20ನೇ ಸಾಲಿನಲ್ಲಿ ಎರಡು ಕಂತಿಗಳ ಅನುದಾನ ಬಿಡುಗಡೆಯಾಗಿದ್ದು, ಮೊದಲನೆಯ ಕಂತಿನ ಅನುದಾನ ಪ್ರತಿ ಕ್ಷೇತ್ರಕ್ಕೆ ರೂ.50.00 ಲಕ್ಷಗಳು ಬಿಡುಗಡೆ ಮಾಡಲಾಗಿದೆ. ಎರಡನೆಯ ಕಂತಿನ ಅನುದಾನ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನ ಮಾತ್ರ ಎಲ್ಲಾ ಕ್ಷೇತ್ರಗಳಿಗೂ ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾದ ಎರಡನೆಯ ಕಂತಿನ ಎಸ್.ಸಿ.ಪಿ/ ಟಿ.ಎಸ್.ಪಿ ಅನುದಾನವನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಿಗದಿತ **ಕಾಲವಧಿಯಲ್ಲಿ ಜಮೆ ಮಾಡಿಕೊಳ್ಳದೆ ಲ್ಯಾಪ್ಸ್** ಮಾಡಿರುತ್ತಾರೆ. ಆದ್ದರಿಂದ ತಲಾ ರೂ.50.00 ಲಕ್ಷಗಳು ಮಾತ್ರ ಜಮೆಯಾಗಿರುತ್ತದೆ
(ಆ)	ಸದರಿ ಬಾಕಿ ಅನುದಾನ ಬಿಡುಗಡೆಯ ವಿಳಂಬತೆಯಿಂದ ಹಲವು ಸಾರ್ವಜನಿಕ ಕಾಮಗಾರಿಗಳ ಪ್ರಗತಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿಳಂಬ ತಪ್ಪಿಸಲು ಸರ್ಕಾರದ ಕ್ರಮವೇನು;(ವಿವರ ನೀಡುವುದು)	ಹೌದು. ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಲ್ಯಾಪ್ಸ್ ಮಾಡಿಕೊಂಡಿರುವ ಎಸ್.ಸಿ.ಪಿ/ ಟಿ.ಎಸ್.ಪಿ ಅನುದಾನವನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯು ಲ್ಯಾಪ್ಸ್ ಆಗಿರುವ ಅನುದಾನವನ್ನು ಬಿಡುಗಡೆಗೊಳಿಸಲು ಅವಕಾಶವಿಲ್ಲವೆಂದು ದಿನಾಂಕ:8.12.2020ರ ಹಿಂಬರಹದಲ್ಲಿ ತಿಳಿಸಿರುತ್ತಾರೆ. ಲಭ್ಯವಿರುವ ಅನುದಾನದಲ್ಲಿ ಶೇಕಡ 75 ರಷ್ಟು ವೆಚ್ಚ ಭರಿಸಿದ ನಂತರ ಉಳಿದ ಅನುದಾನ ಬಿಡುಗಡೆ ಮಾಡಲಾಗುವುದು. ಈ ಕುರಿತು ದಿನಾಂಕ:04.02.2020 ರಂದು ಮಾನ್ಯ ಮುಖ್ಯಮಂತ್ರಿಯವರು ಮತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ:23.06.2020ರಂದು ಪತ್ರ ಮೂಲಕ ತಲಾ ರೂ.2.00 ಕೋಟಿಗಳ ಅನುದಾನಕ್ಕೆ ಕ್ರಿಯಾ ಯೋಜನೆ ರೂಪಿಸಲು ಹಾಗೂ ಕಾಮಗಾರಿಗಳ ಪ್ರಗತಿಯ ವೇಗವನ್ನು ಹೆಚ್ಚಿಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ.

(ಇ)	2019-2020ರ ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಲ್ಲಿನ ಪೂರ್ಣ ಅನುದಾನ ಬಿಡುಗಡೆಯಾಗದೇ ಇರುವುದಕ್ಕೆ ಕಾರಣಗಳೇನು ಮತ್ತು ಬಾಕಿ ಉಳಿದಿರುವ ಅನುದಾನದ ಬಿಡುಗಡೆಗೆ ಸರ್ಕಾರದ ಕ್ರಮಗಳೇನು?(ವಿವರ ನೀಡುವುದು)	2019-20ನೇ ಸಾಲಿನಲ್ಲಿ ಈಗಾಗಲೇ ಎರಡು ಕಂತಿಗಳ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ಮೊದಲನೆಯ ಕಂತಿನಅನುದಾನ ಎಲ್ಲಾ ಶಾಸಕರುಗಳಿಗೆ ಎರಡನೆಯ ಕಂತಿನ ಅನುದಾನದಲ್ಲಿ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನವನ್ನು ಮಾತ್ರ ಎಲ್ಲಾ ಶಾಸಕರುಗಳಿಗೆ ಬಿಡುಗಡೆ ಮಾಡಲಾಗಿದೆ. ಮೂರು ಮತ್ತು ನಾಲ್ಕನೆಯ ಕಂತಿನ ಅನುದಾನ ಬಿಡುಗಡೆಯಾಗದೆ ಇರಲು ಜಿಲ್ಲಾಧಿಕಾರಿಗಳ ಪಿ.ಡಿ.ಖಾತೆಯಲ್ಲಿ ಆರಂಭಿಕ ಶಿಲ್ಕು ಹಾಗೂ ಬಿಡುಗಡೆಯಾದ ಅನುದಾನ ಸೇರಿ ಒಟ್ಟಾರೆ ಲಭ್ಯವಿದ್ದ ಅನುದಾನದಲ್ಲಿ ಶೇ 75 ರಷ್ಟು ವೆಚ್ಚವಾಗದ ಕಾರಣ ಉಳಿದ ಕಂತುಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುವುದಿಲ್ಲ. ಪ್ರಸ್ತುತ, ಉಳಿದ ಕಂತುಗಳ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಸಂಖ್ಯೆ: ಪಿಡಿಎಸ್ 12 ಕೆಎಲ್ಎಸ್ 2021

(ಕೆ.ಸಿ.ನಾರಾಯಣಗೌಡ),
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.